ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೦೯

# ಕರ್ನಾಟಕ ವಿಧಾನ ಪರಿಷತ್ತು

**ನೂರ ಮೂವತ್ತೆಂಟನೆಯ ಅಧಿವೇಶನ**

**ಗುರುವಾರ, ದಿನಾಂಕ: ೨೫ನೇ ಜುಲೈ, ೨೦೧೯**

---

**ಸಮೂಹ – IV**

೧. ಮುಖ್ಯಮಂತ್ರಿಗಳು.

೨. ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು.

೩. ಸಣ್ಣ ಕೈಗಾರಿಕೆ ಸಚಿವರು.

೪. ಗಣಿ ಮತ್ತು ಭೂವಿಜ್ಞಾನ ಸಚಿವರು.

೫. ಸಕ್ಕರೆ ಸಚಿವರು.

೬. ಸಾರಿಗೆ ಸಚಿವರು.

---

## ಚುನಾಯಿತ ಪ್ರತಿನಿಧಿಗಳ ಶಿಷ್ಟಾಚಾರದ ಬಗ್ಗೆ

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ) –**

೧೨೧ (೬೨೧) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಸಿಬ್ಬಂದಿ ಮತ್ತು ಆಡಳಿತ ಸುಧರಣೆ ಇಲಾಖೆಯು ಚುನಾಯಿತ ಪ್ರತಿನಿಧಿಗಳ ಶಿಷ್ಟಾಚಾರ ಕುರಿತಂತೆ ಅನೇಕ ಸುತ್ತೋಲೆಗಳನ್ನು ಹೊರಡಿಸಿರುವುದು ನಿಜವೇ:

(ಆ) ಹಾಗಿದ್ದಲ್ಲಿ, ಶಿಷ್ಟಾಚಾರ ಉಲ್ಲಂಘನೆಯ ಪ್ರಕರಣಗಳು ಮರುಕಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :

(ಇ) ಬಂದಿದ್ದಲ್ಲಿ, ಶಿಷ್ಟಾಚಾರ ಉಲ್ಲಂಘಿಸಿದ ಅಧಿಕಾರಿಗಳ ಮೇಲೆ ಕೈಗೊಂಡ ಕಾನೂನು ಕ್ರಮಗಳೇನು ;

(ಈ) ಶಿಷ್ಟಾಚಾರ ಉಲ್ಲಂಘನೆಯಂತಹ ಮುಜುಗರ ಹಾಗೂ ಅಪಮಾನದ ಪ್ರಸಂಗಗಳಿಂದ ಶಾಸಕರನ್ನು ರಕ್ಷಿಸಲಾಗುವುದೇ ;

(ಉ) ಹಾಗಿದ್ದಲ್ಲಿ, ಯಾವ ರೀತಿಯ ಕಠಿಣ ಕ್ರಮ ಕೈಗೊಳ್ಳಲಾಗುವುದು ?

## ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳ ದಾಲ್ ಮಿಲ್‌ಗಳನ್ನು ಪುನಶ್ಚೇತನಗೊಳಿಸುವ ಬಗ್ಗೆ

**ಶ್ರೀ ತಿಪ್ಪಣ್ಣ ಕಮಕನೂರ (ನಾಮನಿರ್ದೇಶನ ಹೊಂದಿದವರು) –**

೧೨೨ (೬೩೬) ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿರುವ ದಾಲ್ ಮಿಲ್‌ಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ದಾಲ್ ಮಿಲ್‌ಗಳು ಕೆಲವು ಸಮಸ್ಯೆಗಳಿಂದ ಮುಚ್ಚುವ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಅದಕ್ಕೆ ಕಾರಣ ನೀಡುವುದು;

(ಇ) ದಾಲ್ ಮಿಲ್‌ಗಳನ್ನು ಪುನಶ್ಚೇತನಗೊಳಿಸಲು ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಈ) ಪುನಶ್ಚೇತನ ಹಿನ್ನೆಲೆಯಲ್ಲಿ ಜಿಲ್ಲಾ ಆಡಳಿತದಿಂದ ವರದಿಯನ್ನು ಸರ್ಕಾರ ತರಿಸಿಕೊಂಡಿದೆಯೇ ; ತರಿಸಿಕೊಂಡಿದ್ದಲ್ಲಿ ಮಾಹಿತಿ ನೀಡುವುದು ; ಜಿಲ್ಲಾ ಆಡಳಿತ ಮಾಡಿರುವ ಶಿಫಾರಸ್ಸುಗಳ ಮಾಹಿತಿ ಒದಗಿಸುವುದು ?

## ಕೆ.ಐ.ಎ.ಡಿ.ಬಿ. ಭೂಮಿಯ ಬಗ್ಗೆ

**ಶ್ರೀ ಸಿ.ಆರ್. ಮನೋಹರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೨೩ (೬೩೨) ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಳೆದ ೩ ವರ್ಷಗಳಲ್ಲಿ ಕೋಲಾರ–ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಕೆ.ಐ.ಎ.ಡಿ.ಬಿ. ವತಿಯಿಂದ ಎಷ್ಟು ಎಕರೆ ಭೂಮಿಯನ್ನು ಕೈಗಾರಿಕೆ ಉದ್ದೇಶಕ್ಕಾಗಿ ವಶಪಡಿಸಿಕೊಳ್ಳಲಾಗಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಈ ರೀತಿ ವಶಪಡಿಸಿಕೊಳ್ಳಲಾಗಿರುವ ಎಷ್ಟು ಎಕರೆ ಭೂಮಿಯನ್ನು ಕೈಬಿಡಲಾಗಿದೆ; ಕಾರಣಗಳೇನು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಕಳೆದ ೩ ವರ್ಷಗಳಲ್ಲಿ ಎಷ್ಟು ಕೈಗಾರಿಕೆಗಳಿಗೆ ಸರ್ಕಾರವು ಭೂಮಿಯನ್ನು ಮಂಜೂರು ಮಾಡಿದೆ ;

(ಈ) ಕೋಲಾರ–ಚಿಕ್ಕಬಳ್ಳಾಪುರ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬೃಹತ್ ಕೈಗಾರಿಕೆಗಳ ಸ್ಥಾಪನೆಗಾಗಿ ಕಾಯ್ದಿರಿಸಲಾಗಿರುವ ಪ್ರದೇಶಗಳಾವುವು ? (ಇಲ್ಲಿ ಸ್ಥಾಪನೆಯಾಗಿರುವ ಕೈಗಾರಿಕೆಗಳ ಸಂಪೂರ್ಣ ವಿವರಗಳನ್ನು ನೀಡುವುದು)

## ಆಮದು ವಸ್ತುಗಳ ಮೇಲೆ ತೆರಿಗೆ ವಿಧಿಸುವ ಕುರಿತು

**ಶ್ರೀ ಎಸ್. ರವಿಕುಮಾರ್** (ವಿಧಾನಸಭೆಯಿಂದ ಚುನಾಯಿತರಾದವರು) –

೧೨೪ (೬೩೦) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯ ಸರ್ಕಾರವು ಆಮದಾಗುವ ವಸ್ತುಗಳ ಮೇಲೆ ಯಾವ ಯಾವ ತೆರಿಗೆ ವಿಧಿಸುತ್ತದೆ ; (ವಿವರ ನೀಡುವುದು)

(ಆ) ಮಾಜಿ ಮುಖ್ಯಮಂತ್ರಿಗಳಿಗೆ ಕೊಡುಗೆಯಾಗಿ ನೀಡಿರುವ ಹೂಬ್ಲೋಟ್ ವಾಚ್‌ನ್ನು ಭಾರತಕ್ಕೆ ಆಮದು ಮಾಡುವ ಸಂದರ್ಭದಲ್ಲಿ ಎಷ್ಟು ಮೊತ್ತದ ಕಸ್ಟಂಮ್ಸ್ ಶುಲ್ಕವನ್ನು ಪಾವತಿ ಮಾಡಲಾಗಿದೆ ; ಈ ಕುರಿತು ಸರ್ಕಾರದ ಬಳಿ ಯಾವ ರೀತಿಯ ದಾಖಲೆ ಇದೆ ; (ವಿವರ ನೀಡುವುದು)

(ಇ) ಅಂದಿನ ಮುಖ್ಯಮಂತ್ರಿಗಳಿಗೆ ಕೊಡುಗೆ ರೂಪದಲ್ಲಿ ರೂ. ೭೫ ಲಕ್ಷ ಮೌಲ್ಯದ ಹೂಬ್ಲೋಟ್ ವಾಚ್ ನೀಡಲು ಕಸ್ಟಂಮ್ಸ್ ಶುಲ್ಕದಲ್ಲಿ ವಿನಾಯಿತಿ ನೀಡಲಾಗಿದೆಯೇ ; ಹಾಗಿದ್ದಲ್ಲಿ, ಯಾವ ನಿಯಮದ ಅನ್ವಯ ಈ ವಿನಾಯಿತಿ ಪಡೆಯಲಾಗಿದೆ ; (ನಿಯಮದ ಪ್ರತಿ ಒದಗಿಸುವುದು)

(ಈ) ರಾಜ್ಯ ಸರ್ಕಾರವು ಈ ಹೂಬ್ಲೋಟ್ ವಾಚ್ ಮೇಲೆ ಯಾವ ಯಾವ ರೀತಿಯ ತೆರಿಗೆ ವಿಧಿಸಿದೆ ?

## ಕೈಗಾರಿಕಾ ಪ್ರದೇಶಗಳ ಮಾಹಿತಿ

**ಶ್ರೀ ಎಸ್. ಅಪ್ಪಾಜಿಗೌಡ** (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –

೧೨೫ (೬೯೧) ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಮಂಡ್ಯ ಜಿಲ್ಲೆಯಲ್ಲಿ ಕೈಗಾರಿಕೆಗಳಿಗಾಗಿ ಸರ್ಕಾರವು ಗೊತ್ತುಪಡಿಸಿದ ಪ್ರದೇಶಗಳು ಯಾವುವು ;

(ಆ) ಸದರಿ ಕೈಗಾರಿಕಾ ಪ್ರದೇಶದಲ್ಲಿ ಇದುವರೆಗೂ ನಿವೇಶನಗಳನ್ನು ಯಾರಿಗೆ ಹಂಚಿಕೆ ಮಾಡಲಾಗಿದೆ ; (ವಿವರ ನೀಡುವುದು)

(ಇ) ಹಂಚಿಕೆಯಾಗದೆ ಖಾಲಿ ಉಳಿದ ನಿವೇಶನಗಳು ಎಷ್ಟು ? (ಪ್ರದೇಶವಾರು ವಿಸ್ತೀರ್ಣ ಸಹಿತ ವಿವರ ನೀಡುವುದು)

## ಕೈಗಾರಿಕಾ ಕ್ಲಸ್ಟರ್‌ಗಳ ಸ್ಥಾಪನೆ

**ಶ್ರೀ ಕೆ.ಸಿ. ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೨೬ (೬೩೫) ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕೈಗಾರಿಕಾಭಿವೃದ್ಧಿಗಾಗಿ ಕಾಂಪೀಟ್ ವಿತ್ ಚೈನಾ ಯೋಜನೆಯಡಿಯಲ್ಲಿ ಕೈಗಾರಿಕಾ ಕ್ಲಸ್ಟರ್‌ಗಳ ಸ್ಥಾಪನೆಗಾಗಿ ಸರ್ಕಾರದಿಂದ ನೀಡಲಾಗಿರುವ ಅನುದಾನವೆಷ್ಟು ;

(ಆ) ಈ ಯೋಜನೆಗಾಗಿ ಆಯ್ಕೆಗೊಂಡಿರುವ ಜಿಲ್ಲೆಗಳ ಸಂಖ್ಯೆಯೆಷ್ಟು ; ಅವು ಯಾವುವು ;

(ಇ) ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಉದ್ಯಮಗಳ ಸ್ಥಾಪನೆಗೆ ಚಾಲನೆ ದೊರೆತಿದೆಯೇ ?

## ಸರ್ಕಾರಿ ನೌಕರರ ಪದೋನ್ನತಿಯು ಬಗ್ಗೆ

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೨೭ (೬೩೭) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಸರ್ಕಾರಿ ನೌಕರರ ಪದನ್ನೋತಿ ಹಂತಗಳೆಷ್ಟು ;

(ಆ) ಎಷ್ಟು ವರ್ಷಗಳಿಗೆ ಸರ್ಕಾರಿ ನೌಕರರಿಗೆ ಪದನ್ನೋತಿ ನೀಡಬೇಕು ;

(ಇ) ಸರ್ಕಾರದಿಂದ ಪದನ್ನೋತಿ ಹಂತಗಳನ್ನು ಮೀರಿ ಹೆಚ್ಚಿಗೆ ಪದನ್ನೋತಿ ಪಡೆದ ಪ್ರಕರಣಗಳೇನಾದರೂ ಇವೆಯೇ ; ಇದ್ದಲ್ಲಿ, ಇಲಾಖಾವಾರು ಮಾಹಿತಿ ನೀಡುವುದು ?

## ಬೆಳ್ತಂಗಡಿ ತಾಲ್ಲೂಕಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಘಟಕ ನಿರ್ಮಾಣದ ಕುರಿತು ಮಾಹಿತಿ

**ಶ್ರೀ ಕೆ. ಹರೀಶ್ ಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೧೨೮ (೭೮೬) ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಳ್ತಂಗಡಿ ತಾಲ್ಲೂಕು ಕೇಂದ್ರದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಘಟಕ ನಿರ್ಮಾಣದ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಆ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು ? (ಮಾಹಿತಿ ನೀಡುವುದು)

## ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಅನುದಾನದ ಬಳಕೆ ಹಾಗೂ ಮೇ–೨೦೧೪ರ ಮಾರ್ಗಸೂಚಿಗಳ ಬಗ್ಗೆ

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) –**

೧೨೯ (೭೮೦) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಮಾರ್ಗಸೂಚಿ ಮೇ–೨೦೧೪ರ ಪ್ರಕಾರ ಶಾಸಕರುಗಳಿಗೆ ಬಿಡುಗಡೆ ಮಾಡಿದ ಹಣವನ್ನು ೨ ವರ್ಷಗಳ ಬಳಕೆ ಮಾಡದಿದ್ದಲ್ಲಿ ಅಂತಹ ಅನುದಾನವನ್ನು ವಾಪಸ್ಸು ಅಥವಾ ರದ್ದು ಪಡಿಸುವುದು ನಿಜವೇ ;

(ಆ) ಶಾಸಕರುಗಳಿಗೆ ಬಿಡುಗಡೆ ಮಾಡಿದ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನ ಬಳಕೆಯ ಕುರಿತು ಆಯಾ ನೋಡಲ್ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಂಬಂಧಪಟ್ಟ ಶಾಸಕರುಗಳ ಸಭೆಯನ್ನು ಏರ್ಪಡಿಸಿ ಅನುದಾನದ ಬಳಕೆಯ ಕುರಿತು ಮಾಹಿತಿಯನ್ನು ತಿಳಿದುಕೊಳ್ಳಲು ರಿವ್ಯೂ ಮೀಟಿಂಗ್‌ನ್ನು ನಡೆಸುವಂತಹ ಪದ್ಧತಿ ಜಾರಿಯಲ್ಲಿದೆಯೇ ; ಹಾಗಿದ್ದಲ್ಲಿ ವರ್ಷದಲ್ಲಿ ಎಷ್ಟು ಬಾರಿ ಇಂತಹ ಸಭೆಗಳನ್ನು ಜಿಲ್ಲಾಧಿಕಾರಿಗಳು ಏರ್ಪಡಿಸಿರುವರು ; (ಮಾಹಿತಿ ನೀಡುವುದು)

(ಇ) ಈ ರೀತಿಯ ಕಾನೂನನ್ನು ಇದೇ ವರ್ಷದಿಂದ (೨೦೧೯) ಜಾರಿ ಮಾಡಲಾಗುತ್ತಿದೆಯೇ ? (ಮಾಹಿತಿ ನೀಡುವುದು)

## ರಾಜ್ಯದಲ್ಲಿನ ಜಿಲ್ಲಾ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಖಾಲಿ ಇರುವ ಹುದ್ದೆಗಳ ಬಗ್ಗೆ

**ಶ್ರೀ ಆರ್. ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೩೦ (೬೨೫) ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿನ ಜಿಲ್ಲಾ ಪ್ರದೇಶಿಕ ಸಾರಿಗೆ ಕಛೇರಿಗಳಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ರಾಜ್ಯದ ಎಲ್ಲಾ ಜಿಲ್ಲಾ ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ ಇದೆಯೇ ; ಇಲ್ಲದಿರುವ ಜಿಲ್ಲೆಗಳಾವುವು; (ವಿವರ ನೀಡುವುದು)

(ಇ) ಶಿವಮೊಗ್ಗ ಜಿಲ್ಲೆಯ ಜಿಲ್ಲಾ ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ ದಿನಂಪ್ರತಿ ಬರುವ ಸಾರ್ವಜನಿಕರಿಗೆ ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ ಸರಿಯಾಗಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಇಂತಹ ಸೌಲಭ್ಯಗಳನ್ನು ಒದಗಿಸಲು ಎಲ್ಲಾ ಜಿಲ್ಲಾ ಸಾರಿಗೆ ಕಚೇರಿಗಳಿಗೆ ಪ್ರಸ್ತುತ ಸಾಲಿನಲ್ಲಿ ಬಿಡುಗಡೆ ಮಾಡಲಾದ ಅನುದಾನವೆಷ್ಟು ; (ವಿವರ ನೀಡುವುದು)

(ಉ) ಶಿವಮೊಗ್ಗ ಜಿಲ್ಲಾ ಪ್ರಾದೇಶಿಕ ಅಧಿಕಾರಿ ಸ್ಥಾನ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಖಾಲಿ ಇದ್ದಲ್ಲಿ, ಅದನ್ನು ತುಂಬಲು ಕೈಗೊಂಡ ಕ್ರಮವೇನು ?

## ಕರ್ನಾಟಕ ಲೋಕ ಸೇವಾ ಆಯೋಗದ ಸದಸ್ಯರ ನೇಮಕಾತಿ ಬಗ್ಗೆ

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ) –**

೧೩೧ (೭೬೩) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಅಖಂಡ ಕರ್ನಾಟಕ ನಿರ್ಮಾಣದ ನಂತರ ಇಲ್ಲಿಯವರೆಗೆ ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ನೇಮಕವಾದ ಸದಸ್ಯರ ಹೆಸರುಗಳೇನು ;

(ಆ) ಅವರು ಯಾವ ಜಿಲ್ಲೆ ಹಾಗೂ ತಾಲ್ಲೂಕಿಗೆ ಸೇರಿದವರಾಗಿದ್ದಾರೆ ; (ಸಂಪೂರ್ಣ ವಿಳಾಸ ಒದಗಿಸುವುದು)

(ಇ) ಕರ್ನಾಟಕ ಲೋಕ ಸೇವಾ ಆಯೋಗದ ಸದಸ್ಯರಲ್ಲಿ ಉತ್ತರ ಕರ್ನಾಟಕ ಭಾಗಕ್ಕೆ ಸೇರಿದವರು ಯಾರ್‍ಯಾರು ;

(ಈ) ಕರ್ನಾಟಕ ಲೋಕ ಸೇವಾ ಆಯೋಗದ ಅಧ್ಯಕ್ಷರಾಗಿ ನೇಮಕವಾದವರು ಯಾರು ;

(ಉ) ಇವರು ಯಾವ ಜಿಲ್ಲೆ ಹಾಗೂ ತಾಲ್ಲೂಕಿಗೆ ಸೇರಿದವರು (ಸಂಪೂರ್ಣ ವಿಳಾಸ ಒದಗಿಸುವುದು)

(ಊ) ಇವರಲ್ಲಿ ಉತ್ತರ ಕರ್ನಾಟಕಕ್ಕೆ ಸೇರಿದ ಅಧ್ಯಕ್ಷರು ಯಾರು ;

(ಋ) ಈ ನೇಮಕಾತಿಗಳಲ್ಲಿ ಕೂಡಾ ಉತ್ತರ ಕರ್ನಾಟಕಕ್ಕೆ ಅನ್ಯಾಯವಾಗಿರುವುದು ನಿಜವೇ ;

(ಎ) ಹಾಗಿದ್ದಲ್ಲಿ, ಈ ನೇಮಕಾತಿಗಳಲ್ಲಿನ ತಾರತಮ್ಯಗಳನ್ನು ಸರಿಪಡಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು ?

**ರಾಯಚೂರು ನಗರದಲ್ಲಿ ವಿಮಾನ ನಿಲ್ದಾಣ ನಿರ್ಮಾಣ ಮಾಡುವ ಬಗ್ಗೆ**

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೧೩೨ (೭೭೫) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಯಚೂರು ನಗರದಲ್ಲಿ ವಿಮಾನ ನಿಲ್ದಾಣ ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಆ) ಮುನಿರಾಬಾದ್–ಮಹೆಬೂಬನಗರ ರೈಲ್ವೆ ಮಾರ್ಗ ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ಜಿಂದಾಲ್ ಕಂಪನಿಗೆ ಬಳ್ಳಾರಿ ಜಿಲ್ಲೆಯಲ್ಲಿ ಗುತ್ತಿಗೆ ಆಧಾರದ ಮೇಲೆ ನೀಡಿದ್ದ ಭೂಮಿಯ ಬಗ್ಗೆ

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೩೩ (೭೬೦) ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಜಿಂದಲ್ ಸಂಸ್ಥೆಯು ಬಳ್ಳಾರಿಯಲ್ಲಿ ಯಾವಾಗ ಉಕ್ಕಿನ ಉತ್ಪಾದನೆಯನ್ನು ಪ್ರಾರಂಭಿಸಿತ್ತು ;

(ಆ) ಈ ಸಂಸ್ಥೆಗೆ ನೀಡಲಾದ ಒಟ್ಟು ಜಮೀನಿನ ಪ್ರಮಾಣ ಎಷ್ಟು ;

(ಇ) ಲೀಸ್ ಒಪ್ಪಂದ ಮಾಡಿಕೊಳ್ಳುವಾಗ ಹಾಕಿದ ನೀತಿ ನಿಯಮಾವಳಿಗಳನ್ನು ಸಂಸ್ಥೆಯು ಸಂಪೂರ್ಣವಾಗಿ ಪಾಲಿಸಿದೆಯೇ ;

(ಈ) ಕಂಪನಿಯ ಮೇಲೆ ಕಾನೂನು ಉಲ್ಲಂಘನೆಗೆ ಸಂಬಂಧಿಸಿದಂತೆ ಹಲವಾರು ಪ್ರಕರಣ ದಾಖಲಾಗಿದ್ದು, ಅವುಗಳು ಇತ್ಯರ್ಥವಾಗದೇ ಲೀಸ್‌ಗಾಗಿ ಕೊಟ್ಟ ಜಮೀನನ್ನು ಮಾರಾಟ ಮಾಡುವುದು ನಿಯಮಾನುಸಾರವಾಗಿದೆಯೇ ; (ವಿವರ ನೀಡುವುದು)

(ಉ) ಈ ಮಾರಾಟದ ಬೆಲೆಯನ್ನು ನಿರ್ಧರಿಸಲು ಹಮ್ಮಿಕೊಂಡಿರುವ ವೈಜ್ಞಾನಿಕ ಮಾನದಂಡಗಳೇನು ?

## ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಸಾಲ ಸೌಲಭ್ಯ ನೀಡುವ ಬಗ್ಗೆ

**ಶ್ರೀ ಆರ್. ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೩೪ (೭೨೪) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಉದ್ದಿಮೆದಾರರಿಗೆ ಅಥವಾ ಫಲಾನುಭವಿಗಳಿಗೆ ನೀಡುವ ಗರಿಷ್ಠ ಸಾಲ ಸೌಲಭ್ಯ ಎಷ್ಟು ; ಸಾಲ ಸೌಲಭ್ಯಕ್ಕಾಗಿ ಎಷ್ಟು ಶೇಕಡವಾರು ಆರ್ಥಿಕ ಭದ್ರತೆ ನೀಡುವುದು ಕಡ್ಡಾಯವಾಗಿರುತ್ತದೆ ;

(ಆ) ಆರ್ಥಿಕ ಭದ್ರತೆಯ ಮಿತಿಯನ್ನು ಕಡಿತಗೊಳಿಸುವ ಬಗ್ಗೆ ಸರ್ಕಾರ ಚಿಂತಿಸಿದೆಯೇ;

(ಇ) ಈಗ ಚಾಲ್ತಿಯಲ್ಲಿರುವ ಮರುಪಾವತಿಯ ಅವಧಿ ಎಷ್ಟು ; ಮರುಪಾವತಿಯ ಅವಧಿಯನ್ನು ವಿಸ್ತರಿಸಲು ಸರ್ಕಾರ ಯೋಚಿಸಿದೆಯೇ ;

(ಈ) ಆರ್ಥಿಕ ಸಮಸ್ಯೆಯಿಂದ ಕೆಲವು ಸಂದರ್ಭದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಸಾಲ ಮರುಪಾವತಿಸಲು ಸಾಧ್ಯವಾಗದೆ ಡಿಫಾಲ್ಟರ್ ಆದಾಗ ಸಹಾಯ ಧನ ಕೊಡುವುದನ್ನು ನಿಲ್ಲಿಸಲಾಗುತ್ತಿದ್ದು, ಇದರಿಂದ ಸಾಕಷ್ಟು ಫಲಾನುಭವಿಗಳಿಗೆ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಸಾಲ ಮರುಪಾವತಿಯನ್ನು ಮರು ವಿಂಗಡಣೆ ಮಾಡಿ ಸರ್ಕಾರದ ಬಡ್ಡಿ ಸಹಾಯ ಧನವನ್ನು ನಿಲ್ಲಿಸದಿರುವ ಯೋಚನೆಯು ಸರ್ಕಾರದ ಮುಂದಿದೆಯೇ;

(ಊ) ಕೆ.ಎಸ್.ಎಫ್.ಸಿ.ಯಿಂದ ಸಾಲ ಸೌಲಭ್ಯದ ಕುರಿತು ಪ್ರಚಾರ ಕಡಿಮೆಯಾಗಿ ಫಲಾನುಭವಿಗಳು ಮಾಹಿತಿಯ ಕೊರತೆಯಿಂದ ಯೋಜನೆಯ ಸದುಪಯೋಗ ಪಡೆಯಲು ವಿಫಲರಾಗುತ್ತಿರುವುದನ್ನು ಸರ್ಕಾರ ಗಮನಿಸಿದೆಯೇ ;

(ಋ) ಸರ್ಕಾರ ರೂಪಿಸಿರುವ ಕಾಯ್ದೆಯಂತೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಗುತ್ತಿಗೆದಾರರು ಸರ್ಕಾರಿ ಕಾಮಗಾರಿಗಳಲ್ಲಿ ೫೦ ಲಕ್ಷ ರೂಪಾಯಿಗಳವರೆಗೆ ಟೆಂಡರ್ ನಿಂದ ವಿನಾಯಿತಿ ಹೊಂದಿರುತ್ತಾರೆ, ಅವರು ಗುತ್ತಿಗೆ ಕಾಮಗಾರಿ ಮಾಡಲು ಕೆ.ಎಸ್.ಎಫ್.ಸಿ. ವತಿಯಿಂದ ಆರ್ಥಿಕ ಸಹಾಯ ನೀಡುವ ಬಗ್ಗೆ ಸರ್ಕಾರದ ಉದ್ದೇಶವಿದೆಯೇ ?

## ಧಾರ್ಮಿಕ ಕೈಗಾರಿಕೆ ಎಂಬುದರ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೧೩೫ (೬೨೮) ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಧಾರ್ಮಿಕ ಕೈಗಾರಿಕೆ ಎಂದರೇನು ; ರಾಜ್ಯದಲ್ಲಿ ಇದುವರೆಗೆ ಧಾರ್ಮಿಕ ಕೈಗಾರಿಕೆಗೆಂದು ಎಷ್ಟು ಎಕರೆ ಭೂಮಿಯನ್ನು ಕೆ.ಐ..ಡಿ.ಬಿ. ಮುಖಾಂತರ ಉದ್ಯಮಿಗಳಿಗೆ ಗುತ್ತಿಗೆ/ಮಾರಾಟದ ಮೂಲಕ ವಿತರಿಸಲಾಗಿದೆ : (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಯಾವ ಉದ್ದೇಶಕ್ಕೆ ಕೆ.ಐ.ಡಿ.ಬಿ. ಮುಖಾಂತರ ಉದ್ಯಮಿಗಳಿಗೆ ಗುತ್ತಿಗೆ/ ಮಾರಾಟದ ಮೂಲಕ ವಿತರಿಸಲಾಗಿದೆಯೋ ಆ ಉದ್ದೇಶಕ್ಕೆ ಬಳಸಿಕೊಳ್ಳದ ಎಷ್ಟು ಎಕರೆ ಭೂಮಿಯನ್ನು ಕೆ.ಐ.ಡಿ.ಬಿ. ಹಿಂದಕ್ಕೆ ಪಡೆದುಕೊಳ್ಳಲಾಗಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಬೆಂಗಳೂರು ದಕ್ಷಿಣ ತಾಲ್ಲೂಕು ಉತ್ತರಹಳ್ಳಿ ಹೋಬಳಿ ದೊಡ್ಡಕಲ್ಲಸಂದ್ರ ಗ್ರಾಮದ ಸರ್ವೆ ನಂ. ೩೩/೧(ಪಿ), ೩೩/೨(ಪಿ), ೩೬,೩೭,೩೮,೩೯(ಪಿ) ಮತ್ತು ೬೦(ಪಿ) ಯಲ್ಲಿನ ೨೪ ಎಕರೆ ಜಾಗವನ್ನು ಯಾವ ಉದ್ದೇಶಕ್ಕಾಗಿ ಯಾರಿಗೆ ಕೆ.ಐ.ಡಿ.ಬಿ. ಮುಖಾಂತರ ವಿತರಿಸಲಾಗಿತ್ತು ;

(ಈ) ಪ್ರಸ್ತುತ ಆ ಜಾಗದಲ್ಲಿ ಯಾವ ಕೈಗಾರಿಕೆ ಪ್ರಾರಂಭಗೊಂಡಿದೆ ; ಇದರಿಂದ ಎಷ್ಟು ಕನ್ನಡಿಗರಿಗೆ ಉದ್ಯೋಗ ದೊರೆತಿದೆ ; ಈ ಕೈಗಾರಿಕೆಯ ಉತ್ಪನ್ನಗಳೇನು;

(ಉ) ಸದರಿ ಜಾಗವನ್ನು ನೀಡಿರುವ ಉದ್ದೇಶಕ್ಕೆ ಬಳಸಿಕೊಳ್ಳದಿದ್ದಲ್ಲಿ ಆ ಜಾಗವನ್ನು ಕೆ.ಐ.ಡಿ.ಬಿ. ಹಿಂದಕ್ಕೆ ಪಡೆದುಕೊಳ್ಳಲು ಯಾವ ಕ್ರಮ ಕೈಗೊಂಡಿದೆ ; ಈ ಕುರಿತು ಯಾವಾಗ ನೋಟೀಸ್ ನೀಡಲಾಗಿದೆ ?

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಪರಿಷತ್ತು

**List of Questions for Oral Answers**

**Total No. of Questions - 15**

# LIST - 09

# KARNATAKA LEGISLATIVE COUNCIL

## ONE HUNDRED AND THIRTY EIGHTH SESSION

## Thursday, the 25th July, 2019

---

**GROUP - IV**

1. Chief Minister
2. Minister for Large and Medium Scale Industries
3. Minister for Small Scale Industries
4. Minister for Mines and Geology
5. Minister for Sugar
6. Minister for Transport

---

***PROTOCOL OF ELECTED REPRESENTATIVES***

***Sri Ayanur Manjunath (Graduates' Constituency) -***

121 (621) Will the Chief Minister be pleased to state:-

a) whether it is true that many circulars have been issued by the department of Personnel and Administrative Reforms in connection with protocol of elected representatives;

b) if so, whether it has come to the notice of the Government that cases of violation of protocol are repeating in the State;

c) if so, the legal actions taken against the officers who have violated the protocol;

d) whether MLAs would be protected from the incidents of embarrassment and insulting incidents like violation of protocol;

e) if so, the manner in which stringent action would be taken?

### *RESTORATION OF DAL MILLS IN KALABURAGI AND YADGIRI*

***Sri Tippanna Kamaknur (Nominated) -***

122 (636) Will the Minister for Large and Medium Scale Industries be pleased to state:-

a) the number of dai Mills in Kalaburagi and Yadgiri districts; (talukwise information be furnished)

b) whether it has come to the notice of the Government that few dal mills are at the shut down condition due to some problems; if so, the reasons therefor;

c) the action taken by the State Government to restore the dal mills;

d) whether the Government has obtained the report from the district administration in view of restoration; if so, information be furnished; information of recommendations made by the district administration be furnished?

### *KIADB LAND*

***Sri C.R. Manohar (Local Authorities Constituency) -***

123 (632) Will the Minister for Large and Medium Scale Industries be pleased to state:-

a) the number of acres of land acquired for the purpose of industries by the KIADB in Kolar and Chikkaballapur districts during the last 3 years; (districtwise information be furnished)

b) out of such acquired land, the number of acres of land dropped; the reasons therefor; (districtwise information be furnished)

c) the number of industries for which land has been sanctioned by the Government during the last 3 years;

d) the particulars of places that have been reserved for establishment of large industries in the limits of Kolar-Chikkaballapur districts? (the complete details of industries established in these places be furnished)

**_TAX ON IMPORTED GOODS_**

**_Sri N. Ravi Kumar (Elected by Legislative Assembly) -_**

124 (630) Will the Chief Minister be pleased to state:-

a) the particulars of taxes that would be imposed by the State Government on imported goods; (details be furnished)

b) the amount of custom fees that has been paid during importing hublot watch to India gifted to former Chief minister; the particulars of the document with the Government in this regard; (details be furnished)

c) whether concession has been provided in the custom fees for giving hublot watch worth of 75 lakh rupees in the form of gift to the former Chief minister; if so, the particulars of the rule on which basis this concession has been provided; (rule copy be furnished)

d) the particulars of tax that has been imposed on hublot watch by the State Government?

**_INFORMATION OF INDUSTRIAL AREAS_**

**_Sri N. Appajigowda (Local Authorities Constituency) -_**

125 (791) Will the Minister for Large and Medium Scale Industries be pleased to state:-

a) the particulars of places identified by the Government for industries in Mandya district;

b) the particulars of the persons to whom site have been alloted in the said industrial area so far; (details be furnished)

c) the number of sites remaining without allocation in the said place? (areawise details along with extent be furnished)

**ESTABLISHMENT OF INDUSTRIAL CLUSTERS**

**Sri K.C.Kondaiah (Local Authorities Constituency) -**

126(635) Will the Minister for Large and Medium Scale Industries be pleased to state:-

a) the grant provided by the Government for establishment of industrial clusters under the scheme of compete with china for the development of industries;

b) the total number of districts that has been selected for the said scheme; the particulars of the same;

c) whether the establishment of industries has been initiated in Koppal and Ballari districts?

**PROMOTION OF GOVERNMENT EMPLOYEES**

**Sri Pradeep Shettar (Local Authorities Constituency) -**

127 (637) Will the Chief Minister be pleased to state:-

a) the promotion stages of the Government employees;

b) the duration within which promotion has to be given to the Government employees;

c) whether there are any cases of obtaining promotion from the Government exceeding the stages of promotion; if so, departmentwise information be furnished?

**CONSTRUCTION OF KSRTC DEPOT IN BELTHANGADY TALUK**

**Sri K. Harish Kumar (Elected by Legislative Assembly) -**

128 (786) Will the Minister for Transport be pleased to state:-

a) whether the proposal of construction of Karnataka State Road Transport Corporation depot in the taluk centre of Belthangady is before the Government;

b) if so, the steps taken by the Government in this regard? (information be furnished)

**SCHEME OF KARNATAKA LEGISLATORS' LOCAL AREA DEVELOPMENT FUND**

**Sri S.V. Sankanur (Graduates' Constituency) -**

129 (780) Will the Chief Minister be pleased to state:-

a) whether it is true that if the grant is not utilised within 2 years by the Legislators, the same would be withdrawn or cancelled as per the May-2014 guideline of scheme of Legislators' local area development;

b) whether a practice is there to conduct review meeting of concerned MLAs in connection with utilisation of local area development fund released to them under the chairmanship of the respective nodal district officers so as to get the information about utilisation of grants; if so, the number of times in a year in which the Deputy Commissioner has conducted such meetings; (information be furnished)

c) whether such act is being implemented from 2019 itself? (information be furnished)

**_VACANT POSTS IN DISTRICT R.T.Os_**

**_Sri R.Prasanna kumar (Local Authorities Constituency) -_**

130 (625) Will the Minister for Transport be pleased to state:-

a) the number of vacant posts in District Regional Transport Offices in the State; (districtwise information be furnished)

b) whether there is facility of toilet and drinking water to public in all the RTO offices of the State; if not, the particular of such districts; (details be furnished)

c) whether it has come to the notice of the Government that there is no adequate facility of drinking water and toilets to the public who visit the RTO office in Shivamogga district every day;

d) the grant released to the all district RTO offices for providing such facility in the current year; (details be furnished)

e) whether it has come to the notice of the Government that the post of District Regional Transport officers is vacant in Shivamogga district; if so, the step taken to fill up the said post?

### *APPOINTMENT OF MEMBERS TO K.P.S.C.*

***Sri Basavaraj Shivalingappa Horatti (Teachers' Constituency) -***

131 (763) Will the Chief Minister be pleased to state:-

a) the names of the members appointed to the Karnataka Public Service Commission after unification of Karnataka so far;

b) the particulars of the district and the taluk to which they belonged; (complete address be furnished)

c) among them, the particulars of the members who belonged to North Karnataka;

d) the name of the persons who has been appointed as Chairman of KPSC;

e) the particulars of the district and the taluk to which the said persons have belonged; (complete address be furnished)

f) among them, the name of the persons who belong to North Karnataka?

g) whether it is true that injustice is caused to North Karnataka in these appointments also;

h) if so, the steps to be taken by the Government to redress the disparity in these appointments?

### *CONSTRUCTION OF AIRPORT IN RAICHUR CITY*

***Sri N.S. Bose Raju (Elected by Legislative Assembly) -***

132 (775) Will the Chief Minister be pleased to state:-

a) the steps taken by the Government to construct Airport in Raichur city;

b) the steps taken by the Government to construct Munirabad-Mehaboobnagar railway line?

### *LAND SANCTIONED ON LEASE BASIS TO JINDAL IN BALLARI DISTRICT*

***Sri Kavatagimath Mahantesh Mallikarjun (Local Authorities Constituency) -***

133 (760) Will the Minister for Large and Medium Scale Industries be pleased to state:-

a) the year from which jindal company has started production of steel in Ballari;
b) the total extent of land sanctioned to the said company;
c) whether the company has comply with the rules and regulations completely prescribed during entering into lease agreement;
d) whether selling the land given on lease basis is in accordance with the rules before settling down the cases which were filed against the company in connection with violation of law; (details be furnished)
e) the scientific criteria taken up to determine the value of sale?

***LOAN FACILITY TO SC/ST ENTREPRENEURS***

***Sri R.Prasanna kumar (Local Authorities Constituency) -***

134 (624) Will the Chief Minister be pleased to state:-

a) the maximum loan facility available to the SC/ST entrepreneurs/beneficiaries in Karnataka State Financial Corporation; the percentage of financial surety that has to be paid for loan facility compulsorily;
b) whether the Government has contemplated to reduce the limit of financial surety;
c) the duration of repayment at present; whether Government has contemplated to extend the duration of repayment;
d) whether it has come to the notice of the Government that grant-in-aid is being stopped to the defaulter SC/ST beneficiaries who failed to repay the loan due to some financial problems thereby more beneficiaries are facing inconvenience;
e) whether the Government has contemplated to not stop the interest subsidy of the Government by redistribution of loan repayment;
f) whether the Government is aware of the fact that beneficiaries are failing to get the benefits of the scheme due to lack of information due to less advertisement by the KSFC about the loan facility;

g) whether the Government is contemplated to give financial assistance by the K.S.F.C. to the SC/ST contractors to carryout contract work since they have exemption upto 50 lakh rupees in Government works as per the act framed by the Government?

**_RELIGIOUS INDUSTRY_**

**_Sri N. Ravi Kumar (Elected by Legislative Assembly)_** -

135 (628) Will the Minister for Large and Medium Scale Industries be pleased to state:-

a) the meaning of religious industry; the extent of acres of land allotted through contract/sale to the entrepreneurs for religious industry through KIADB in the State so far; (districtwise information be furnished)

b) the extent of land that has been withdrawn by the KIADB for not utilising out of the land allotted through contract/ sale to the entrepreneurs for the specific purpose; (districtwise information be furnished)

c) the purpose and the person to whom 24 acres of land out of Sy.no. 55/1(p), 55/2(p), 56,57,58,59(p) and 60(p) of Doddakallasandra village, Uttarahalli Hobli in Bengaluru South taluk has been allotted by the KIADB;

d) the particulars of the industry that has been started at present in the said place; the number of kannadigas who have got job by this; the products of the same;

e) if it is not utilised for the said purpose for which it is allotted the action taken by KIADB to withdrawn the said land, the date on which the notice has been served in this regard?

**K.R. MAHALAKSHMI**
Secretary (I/c)
Karnataka Legislative Council.

Govt. Press, Vikasa Soudha, Bengaluru, P7, wd 305, 400 Copies